ಬಹಳಷ್ಟು ಜನ 'ನನ್ನ ಬಳಿ ಒಳ್ಳೆಯ ಸ್ಕ್ರಿಪ್ಟ್ ಇದೆ' ಅಂತಿರ್ತಾರೆ. ಸ್ಕ್ರಿಪ್ಟ್ ಇಂಪಾರ್ಟೆಂಟ್ ಅಲ್ಲ... ನನ್ನ 'ಪಾಪ್‌ಕಾರ್ನ್ ಮಂಕಿ ಟೈಗರ್' ಸಿನಿಮಾ ಸ್ಕ್ರಿಪ್ಟ್ ಕೊಟ್ಬಿಡ್ತೀನಿ. ಪಬ್ಲಿಷ್ ಮಾಡ್ಬಿಡ್ತೀನಿ ಬೇಕಾದ್ರೆ. ನಾನು ಮಾಡುವ ಹಂಗೆ ಸಿನಿಮಾ ಮಾಡ್ಕೊಡ್ತೀರಾ ಯಾರಾದ್ರೂ? ಬೇರೆಯವ್ರು ಮಾಡಿದ್ರೆ ಬೇರೇನೇ ಆಗಿರತ್ತೆ.

ಸೂರ್ಯ ಮುಳುಗೋದನ್ನು ನೋಡಿ ನಿಮ್ಮ ತಲೇಲಿ ಸಾವಿರ ಓಡಬಹುದು, ನನ್ನ ತಲೇಲಿ ಬೇರೆಯದೇ ಸಾವ್ರ ಓಡ್ತಿರ್ತದೆ. ಕ್ಷಣ ಕ್ಷಣ ಕ್ಷಣ ಚೇಂಜಾಗ್ತಿದೆ ಅದು. ನಾನ್ ಹೇಳ್ತೀನಿ 'ಹಿಡಿದ್ಬಿಟ್ಟೆ' ಅಂತ. ಯಾವುದನ್ನು ಹಿಡ್ದಿದ್ದು? ಒಂದು ಸಣ್ಣ ಮೂವ್‌ಮೆಂಟ್ ಅನ್ನು. ಅದಾದ ಮೇಲೆ ಅಲ್ಲಿನ್ನೇನೋ ಆಗ್ತಿರ್ತದಲ್ಲಾ... ನಮ್ಮ ಪ್ರಕಾರ ಸೂರ್ಯ ಮುಳುಗ್ತಿರ್ತಾನೆ. ಆದೇ ಸಮಯಕ್ಕೆ ಸುಮಾರು ಪ್ರಾಣಿ, ಪಕ್ಷಿ ಸಂಕುಲ ಎಲ್ಲ ಎದ್ದುಬಿಡ್ತವೆ. ಹಾಗಾದ್ರೆ ಅವಕ್ಕೆ ಏನಾಗ್ತಿರ್ತದೆ ಆ ಗಳಿಗೆ? ಅವಕ್ಕೆಲ್ಲ ಬೆಳಗು ಸಾರ್ ಅದು...

ಯಾವ್ದೋ ಲೊಕೇಶನ್ ನೋಡಲು ಹೋದಾಗ ಒಂದು ಫೋಟೊ ತೆಗೆದೆ. ಬಯಲು, ಮಳೆ ಬಂದು ನಿಂತಿದೆ. ಒಂಟಿಮರ. ಅದನ್ನೇ ಬಂದು ಪೇಂಟ್ ಮಾಡಿದೆ (ಆ ಪೇಂಟಿಂಗ್ ತೆಗೆದು ತೋರಿಸಿದರು). ಬಯಲಲ್ಲಿ ಮಳೆ ಬಂದು ನಿಂತ ಮೇಲೆ ಎಲ್ಲೋ ಒಂದು ಕಡೆ ಬೆಳಕೆದ್ದು ಬಿಡತ್ತೆ ಗೊತ್ತಾ? ಅದೊಂದು ಅನುಭವ. ಅದನ್ನು ಹೆಂಗೆ ಕ್ಯಾಚ್ ಮಾಡೋದು? ಆ ಅನುಭವದ ಜಾದೂ ಫೋಟೊದಲ್ಲಿಲ್ಲ; ಆದರೆ ನನ್ನ ಪೇಂಟಿಂಗ್‌ನಲ್ಲಿದೆ. ಮರ, ಆಕಾಶ, ಬಯಲು ಅವೆಲ್ಲವೂ ಫೋಟೊದಲ್ಲಿಯೂ ಇವೆ. ನನ್ನ ಚಿತ್ರದಲ್ಲಿಯೂ ಇವೆ. ಆದರೂ ಚಿತ್ರದಲ್ಲಿ ಮತ್ತೇನೋ ಆಗಬೇಕಲ್ಲ. ಅದು ಆ ಜಾದೂ. ಆ ಫೋಟೊ ಸ್ಕ್ರಿಪ್ಟ್. ನಾನು ಮಾಡಿದ ಪೇಂಟಿಂಗ್ ಸಿನಿಮಾ! ಅಷ್ಟೆ.

ಅಕ್ಕಿ, ಬೇಳೆ ಹೀಗೆ ಚಿತ್ರಾನ್ನ ಮಾಡಲು ಬೇಕಾಗುವ ಎಲ್ಲವನ್ನೂ ತಂದು ಪ್ಲೇಟಿಗೆ ಹಾಕಿಕೊಡೋದು, ತಿನ್ನು ಅಂತ. ಅದು ಸ್ಕ್ರಿಪ್ಟ್. ಅದನ್ನೆಲ್ಲ ಸೇರಿಸಿ ಬೇಯಿಸಿದರೆ ಮಾತ್ರ ಚಿತ್ರಾನ್ನ. ಅದಕ್ಕೆ ಬೆಂಕಿ ಬೇಕು. ಹಾಗಾದ್ರೆ ಈ ಚಿತ್ರಾನ್ನ ಮಾಡುವ ಬೆಂಕಿ ಎಲ್ಲಿಂದ ಬರತ್ತೆ? ಬದುಕು ಆ ಬೆಂಕಿಯನ್ನು ಹುಟ್ಟಿಸತ್ತೆ.

ವಾಸ್ತವ ಏನಂದ್ರೆ ನನ್ನ ಮನೆ ಎದುರಿಗೆ ಐರನ್ ಮಾಡ್ತಿದ್ದಾನಲ್ವಾ, ಆತನಿಗೆ ಏನು ಗೊತ್ತಾಗಿದ್ಯೋ ನನಗೂ ಅಷ್ಟೇ ಗೊತ್ತಾಗಿರೋದು. ಐರನ್ ಮಾಡಿದ್ರೆ ದುಡ್ಡು ಬರತ್ತೆ ಅಂತ ಆತನಿಗೆ ಗೊತ್ತಾಗಿದೆ. ಚಿತ್ರಕಲೆ, ನನ್ನೆಲ್ಲ ಎಮೋಷನ್‌ಗಳನ್ನು ಒಂದ್ಕಡೆ ಹಾಕಿ ಸಿನಿಮಾ ಮಾಡಿದ್ರೆ ದುಡ್ಡು ಕೊಡ್ತಾರೆ ಅಂತ ನನಗೆ ಗೊತ್ತಾಗಿದೆ, ಅಷ್ಟೇ. ನನಗೆ ಕೋಟಿ ರೂಪಾಯಿ ಕೊಡ್ತಾರೆ! ಆ ವಿಷಯದಲ್ಲಿ ನಾನು ತುಂಬ ಅದೃಷ್ಟವಂತ.

● ಈ ಸತ್ಯ ನಿಮಗೆ ಹೊಳೆದಿದ್ದು ಯಾವಾಗ?

ನಾನು ತುಂಬ ಸಣ್ಣ ವಯಸ್ಸಿನಲ್ಲಿ ನಂದಿನಿ ಕಂಪನಿಯಿಂದ ಒಂದು ಲಕ್ಷ ರೂಪಾಯಿ ಆರ್ಡರ್ ತಗೊಂಡೆ. ಅವತ್ತು ಒಂದು ಲಕ್ಷ ರೂಪಾಯಿ ನನ್ನ ಕೈಗೆ ಬಂದಾಗ ತುಂಬ ಚಿಕ್ಕ ಹುಡುಗ ನಾನು. ಆಗ ನನಗಿದ್ದ ಸಹವಾಸಗಳಲ್ಲಿ ಆ ಹಣವನ್ನು ಕುಡಿದು ತಿಂದು ಏನು ಬೇಕಾದ್ರೂ ಮಾಡ್ಬೋದಿತ್ತು. ಹಾಗೆ ಮಾಡಲಿಲ್ಲ. ಪೇಪರ್ ತಂದು ಬೋರ್ಡ್‌ಗಳನ್ನು ಮಾಡಿ ಚಿತ್ರಬರೆದು ಕೊಟ್ಟೆ. ಆಗ ನನಗೆ ಆರ್ಡರ್ ಕೊಟ್ಟ ವ್ಯಕ್ತಿ ಹೇಳಿದ: ಇಷ್ಟು ಚಿಕ್ಕ ವಯಸ್ಸಿಗೆ ಇದನ್ನೆಲ್ಲ ಮಾಡ್ತೀಯಾ ಅಂದ್ರೆ ಮುಂದೆ ಏನೋ ದೊಡ್ಡದನ್ನು ಮಾಡ್ತೀಯಾ ಅಂತ. ನಾನು ಈವತ್ತಿಗೂ ನನಗೆ ಗೊತ್ತಿರುವ ಸಂಗತಿ ಇಟ್ಕೊಂಡು ವ್ಯಾಪಾರ ಮಾಡ್ತಿದೀನಿ.